"ಮಧುರ ಮಕ್ಕಳೇ- ನೀವು ಸತ್ತರೆ ನಿಮ್ಮ ಪಾಲಿಗೆ ಇಡೀ ಪ್ರಪಂಚವೇ ಸತ್ತಂತೆ, ತಂದೆಯ ಮಗುವಾಗುವುದು ಎಂದರೆ ದೇಹಾಭಿಮಾನ ಸಮಾಪ್ತಿ, ಒಬ್ಬ ತಂದೆಯ ವಿನಃ ಮತ್ತ್ಯಾರೂ ನೆನಪಿಗೆ ಬರಬಾರದು"

ಪ್ರಶ್ನೆ: ಅಂತಿಮ ಸಮಯವನ್ನು ಸಮೀಪ ನೋಡುತ್ತಾ ಯಾವ ಸ್ಲೋಗನ್ ನೆನಪಿರಬೇಕಾಗಿದೆ?

ಉತ್ತರ: ಕೆಲವರದ್ದು ಮಣ್ಣುಪಾಲಾಗುತ್ತದೆ, ಕೆಲವರದ್ದು ಸರ್ಕಾರ ತಿನ್ನುತ್ತದೆ...... ಈ ಸ್ಲೋಗನ್ ಸದಾ ನೆನಪಿರಲಿ ಏಕೆಂದರೆ ಈಗ ದುಃಖದ ಬೆಟ್ಟ ಬೀಳಲಿದೆ, ಎಲ್ಲರ ಮೃತ್ಯು ಮುಂದೆ ನಿಂತಿದೆ. ನೀವು ಮಕ್ಕಳು ಈಗ ತಂದೆಗೆ ಪೂರ್ಣ ಬಲಿಹಾರಿಯಾಗುತ್ತೀರಿ, ನಿಮ್ಮದೆಲ್ಲವನ್ನೂ ಸಫಲ ಮಾಡುತ್ತೀರಿ, ನೀವು ಒಂದು ಜನ್ಮಕ್ಕೆ ಬಲಿಯಾದರೆ ತಂದೆಯು 21 ಜನ್ಮಕ್ಕೆ ಬಲಿಹಾರಿಯಾಗುತ್ತಾರೆ. 21 ಜನ್ಮಗಳವರೆಗೆ ನಿಮಗೆ ಲೌಕಿಕ ತಂದೆ-ತಾಯಿಯ ಆಸ್ತಿಯ ಅವಶ್ಯಕತೆಯಿಲ್ಲ. ದ್ವಾಪರದಿಂದ ಮತ್ತೆ ಎಂತಹ ಕರ್ಮವೋ ಅಂತಹ ಫಲ ಸಿಗುತ್ತದೆ.

ಗೀತೆ: ನಾನು ಒಂದು ಪುಟ್ಟ ಮಗುವಾಗಿದ್ದೇನೆ.............

ಓಂ ಶಾಂತಿ. ಇವರು ಸರ್ವಶ್ರೇಷ್ಠ ಭಗವಂತನಾಗಿದ್ದಾರೆ ಎಂದು ಮನುಷ್ಯರಿಗೆ ಗೊತ್ತಿದೆ. ಭಗವಂತನನ್ನು ಸದಾ ಪರಮಪಿತ ಪರಮಾತ್ಮನೆಂದು ಹೇಳುತ್ತಾರೆ ಮತ್ತು ಅವರ ಹೆಸರೂ ಶ್ರೇಷ್ಠವಾಗಿದೆ, ಮಹಿಮೆಯೂ ಇದೆ. ಎಲ್ಲದಕ್ಕಿಂತ ಶ್ರೇಷ್ಠ ಮೂಲವತನದಲ್ಲಿರುತ್ತಾರೆ. ಯಾವಾಗ ಗಾಡ್ ಫಾದರ್ ಎಂದು ಹೇಳುತ್ತೇವೆ ಅಂದರೆ ಖಂಡಿತ ನಾವು ಮಕ್ಕಳಾಗುತ್ತೇವೆ. ಈ ರೀತಿ ಹೇಳುವುದಿಲ್ಲ- ನಾವೇ ತಂದೆ ಆಗಿದ್ದೇವೆ. ಸರ್ವವ್ಯಾಪಿ ಎಂದು ಹೇಳಿದಾಗ ಎಲ್ಲರೂ ತಂದೆಯಾಗುತ್ತಾರೆ. ಅವರನ್ನು ಸದಾ ಅತಿದೂರ ಪರಮಧಾಮ ನಿವಾಸಿ ಪರಮಪಿತನೆಂದು ಹೇಳಲಾಗುತ್ತದೆ. ಶ್ರೇಷ್ಠಾತಿಶ್ರೇಷ್ಠ ಭಗವಂತನಾಗಿರುವ ಕಾರಣ ಎಲ್ಲರೂ ನೆನಪು ಮಾಡುತ್ತಾರೆ. ಭಗವಂತ ಭಕ್ತರಿಗೆ ಭಕ್ತಿಯ ಫಲವನ್ನು ಕೊಡುವುದಕ್ಕೆ ಬರುತ್ತಾರೆ ಎಂದು ಹೇಳುತ್ತಾರೆ. ಆ ತಂದೆಯು ಸ್ವರ್ಗದ ರಚಯಿತನಾಗಿದ್ದಾರೆ. ರಚಯಿತ ಖಂಡಿತವಾಗಿ ಹೊಸಪ್ರಪಂಚವನ್ನು ರಚನೆ ಮಾಡುತ್ತಾರೆ ಅಂದಾಗ ಅವರು ಎಲ್ಲಿ ಬರುತ್ತಾರೆ? ಪತಿತ ಪ್ರಪಂಚದಲ್ಲಿಯೋ ಅಥವಾ ಪಾವನ ಪ್ರಪಂಚದಲ್ಲಿ ಬರುತ್ತಾರೆಯೋ? ಈ ಮಾತನ್ನು ಬಹಳ ಚೆನ್ನಾಗಿ ಧಾರಣೆ ಮಾಡಬೇಕಾಗಿದೆ. ನೀವು ಚಿಕ್ಕವರಲ್ಲ, ನಿಮ್ಮ ಶರೀರದ ಕರ್ಮೇಂದ್ರಿಯಗಳು ದೊಡ್ಡದಾಗಿದೆ. ನೀವು ತಿಳಿದುಕೊಂಡಿದ್ದೀರಿ- ಎಲ್ಲರೂ ತಂದೆಯನ್ನು ನೆನಪು ಮಾಡುತ್ತಾರೆ, ಇಲ್ಲಿ ದುಃಖವಿದೆ ಎಂದು ತಿಳಿಯುತ್ತಾರೆ. ನಮ್ಮನ್ನು ಸುಖ-ಶಾಂತಿಯಿರುವ ಜಗತ್ತಿಗೆ ಕರೆದುಕೊಂಡು ಹೋಗಿ. ನಾಟಕದನುಸಾರ ತಂದೆಯು ಬರಲೇಬೇಕಾಗಿದೆ. ಮಾಡಿ-ಮಾಡಲ್ಪಟ್ಟಂತಹದ್ದು ಈಗ ನಡೆಯುತ್ತಿದೆ..... ಇದರಲ್ಲಿ ಯಾವ ವ್ಯತ್ಯಾಸವೂ ಆಗುವುದಿಲ್ಲ. ವಿಶ್ವದ ಇತಿಹಾಸ-ಭೂಗೋಳ ಪುನರಾವರ್ತನೆಯಾಗುತ್ತಾ ಇರುತ್ತದೆ. 4 ಯುಗ ಸುತ್ತುತ್ತಿರುತ್ತದೆ. ಕಲಿಯುಗದ ನಂತರ ಸತ್ಯಯುಗ, ಕಲಿಯುಗ ಹಾಗೂ ಸತ್ಯಯುಗದ ಮಧ್ಯದಲ್ಲಿರುವುದು ಕಲ್ಯಾಣಕಾರಿ ಧರ್ಮದ ಯುಗವಾಗಿದೆ. ಇದು ಪುರುಷೋತ್ತಮಯುಗ ಅರ್ಥಾತ್ ಉತ್ತಮರಲ್ಲಿ ಉತ್ತಮ, ಮರ್ಯಾದಾ ಪುರುಷೋತ್ತಮರಾಗುವಂತಹ ಯುಗವಾಗಿದೆ. ಈ ಯುಗದ ಸಮಾನ ಬೇರೆ ಯಾವ ಯುಗವೂ ಇರುವುದಕ್ಕೆ ಸಾಧ್ಯವಿಲ್ಲ. ಸತ್ಯ-ತ್ರೇತಾದ ಸಂಗಮ ಶ್ರೇಷ್ಠವಲ್ಲ, ಅದರಲ್ಲಿ ಸುಖದ ಎರಡು ಕಲೆ ಕಡಿಮೆಯಾಗುತ್ತದೆ. ಈ ಸಂಗಮಯುಗದ್ದು ಮಾತ್ರ ಮಹಿಮೆಯಿದೆ. ತಂದೆಯು ಸರ್ವಶ್ರೇಷ್ಠರಾಗಿದ್ದಾರೆಂದು ತಿಳಿದಿದ್ದೀರಿ. ಸರ್ವವ್ಯಾಪಿ ಎಂದಲ್ಲ. ಮಕ್ಕಳು ಎಷ್ಟೊಂದು ತಪ್ಪನ್ನು ಮಾಡುತ್ತಾರೆ ಆದರೆ ನಾಟಕದನುಸಾರ ತಪ್ಪುಗಳು ಆಗಲೇಬೇಕು. ತಂದೆಯು ಬಂದು ಮತ್ತೆ ಈ ತಪ್ಪನ್ನು ಸರಿಪಡಿಸುತ್ತಾರೆ. ತಂದೆಯು ಹೇಳುತ್ತಾರೆ- ನನ್ನನ್ನು ನೀವು ಶ್ರೇಷ್ಠಾತಿಶ್ರೇಷ್ಠ ಭಗವಂತನೆಂದು ಕರೆಯುತ್ತೀರಿ. ನಾನು ನೀವು ಮಕ್ಕಳನ್ನು ನನಗಿಂತ ಶ್ರೇಷ್ಠರನ್ನಾಗಿ ಮಾಡುತ್ತೇನೆ ಆ ಕಾರಣ ಭಕ್ತರು ನೆನಪು ಮಾಡುತ್ತಾರೆ ಆದರೆ ಸರ್ವವ್ಯಾಪಿ ಅಂದಾಗ ಎಲ್ಲವೂ ಮಣ್ಣಲ್ಲಿ ಸೇರುತ್ತದೆ. ನಾವೂ ಸಹ ಕಂಗಾಲ ದುಃಖಿಯಾಗಿದ್ದೇವೆ. ಭಾರತವು ಸುಖಧಾಮವಾಗಿತ್ತು, ಈಗ ದುಃಖಧಾಮವಾಗಿದೆ. ಈಗ ತಂದೆಯು ತಿಳಿಸುತ್ತಾರೆ- ನಾನು ನಿಮ್ಮನ್ನು ನನಗಿಂತ ಶ್ರೇಷ್ಠರನ್ನಾಗಿ ಮಾಡುತ್ತೇನೆ. ನಾನು ಪರಮಧಾಮ, ಬ್ರಹ್ಮಾಂಡದಲ್ಲಿರುತ್ತೇನೆ. ನೀವೂ ಶ್ರೇಷ್ಠಾತಿಶ್ರೇಷ್ಠ ಶಿವತಂದೆಗೆ ಯಾವ ಚಿಹ್ನೆಯನ್ನು ತೋರಿಸುತ್ತೀರಿ? ಅವರು ಒಂದು ನಕ್ಷತ್ರವಾಗಿದ್ದಾರೆ. ಹೇಗೆ ಆತ್ಮವಿದೆಯೋ ಹಾಗೆಯೇ ಪರಮಾತ್ಮನೂ ಇರುವುದಾಗಿದೆ. ಭೃಕುಟಿಯ ಮಧ್ಯದಲ್ಲಿ ಹೊಳೆಯುತ್ತಿರುವ ಅದ್ಭುತ ನಕ್ಷತ್ರವಾಗಿದೆ. ಆತ್ಮದ ರೂಪವೂ ನಕ್ಷತ್ರವಾಗಿದೆ. ಇದು ಮಾಡಿ-ಮಾಡಲ್ಪಟ್ಟಂತಹ ನಾಟಕವಾಗಿದೆ. ಎಲ್ಲಾ ಆತ್ಮಗಳು ನಿರಾಕಾರಿ ಪ್ರಪಂಚದಲ್ಲಿ ವೃಕ್ಷದ ಸಮಾನ ಇರುತ್ತದೆ, ಅದನ್ನು ನಿರ್ವಾಣಧಾಮ ಎಂದು ಹೇಳಲಾಗುತ್ತದೆ. ಆತ್ಮಗಳು ನಿರಾಕಾರ ಪ್ರಪಂಚ, ಮಧುರಮನೆಯಿಂದ ಬರುತ್ತದೆ. ಈಗ ದುಃಖಧಾಮವಾಗಿದೆ. ಎಷ್ಟೊಂದು ವಿಭಾಗಗಳಾಗಿವೆ. ಸತ್ಯಯುಗದಲ್ಲಿ ಯಾವುದೇ ವಿಭಾಗಗಳಿರುವುದಿಲ್ಲ. ಭಾರತ ಶ್ರೇಷ್ಠಖಂಡವಾಗಿತ್ತು, ಬಾಬಾರವರನ್ನು ಸತ್ಯವೆಂದು ಹೇಳುತ್ತಾರೆ. ತಂದೆಯು ತಿಳಿಸುತ್ತಾರೆ- ನಾನು ಸತ್ಯಖಂಡವನ್ನು ಸ್ಥಾಪನೆ ಮಾಡುತ್ತೇನೆ ಅಂದಾಗ ಅವಶ್ಯವಾಗಿ ಹೊಸಪ್ರಪಂಚವನ್ನು ಸ್ಥಾಪನೆ ಮಾಡಿ ಹಳೆಯ ಪ್ರಪಂಚವನ್ನು ಸಮಾಪ್ತಿ ಮಾಡುತ್ತಾರೆ. ಈಗ ದುಃಖದ ಬೆಟ್ಟವು ಬೀಳಲಿದೆ. ಕೆಲವರದು ಮಣ್ಣುಪಾಲಾಗುತ್ತದೆ... ಅವರು ತಿಳಿಯುತ್ತಾರೆ- ನಾವು ಬಾಂಬ್ಗಳನ್ನು ತಯಾರುಮಾಡುತ್ತೇವೆ ಅಂತ್ಯದಲ್ಲಿ ಎಲ್ಲವೂ ಸಮಾಪ್ತಿಯಾಗುತ್ತದೆ, ಆಗಲೇಬೇಕು ಆದರೆ ಯಾರು ಪ್ರೇರಣೆಯನ್ನು

ಕೊಡುತ್ತಾರೆ ಎನ್ನುವುದು ಗೊತ್ತಿಲ್ಲ. ಗೀತೆಯಲ್ಲಿಯೂ ಇದೆ- ನಾಭಿಯಿಂದ ಒನಕೆ ಬರುತ್ತದೆಂದು ಇದೆಲ್ಲವೂ ಬುದ್ಧಿಯ ಮಾತಾಗಿದೆ. ತಮ್ಮ ದೇಶದ ವಿನಾಶಕ್ಕಾಗಿ ಬಾಂಬ್ಸ್ ಸಂಶೋಧನೆ ಮಾಡುತ್ತಾರೆ. ಯಾದವರು, ಕೌರವರು, ಪಾಂಡವರು- ಮೂವರು ಮುಖ್ಯ ಸೈನಿಕರಾಗಿದ್ದಾರೆ. ಯಾದವರು, ಕೌರವರು ಯುದ್ಧ ಮಾಡಿ ಸಮಾಪ್ತಿಯಾಗುತ್ತಾರೆ ಬಾಕಿ ಕೌರವರು, ಪಾಂಡವರ ಯುದ್ಧ ನಡೆಯಲಿಲ್ಲ. ನಿಮ್ಮದು ಯಾವುದೇ ಯುದ್ಧವಿಲ್ಲ. ನೀವು ಯೋಗಬಲವುಳ್ಳಂತಹ ರಾಜಋಷಿಗಳಾಗಿದ್ದೀರಿ. ಸನ್ಯಾಸಿಗಳು ಹಠಯೋಗಿ ಋಷಿಗಳಾಗಿದ್ದಾರೆ. ಅವರು ಶಂಕರಾಚಾರ್ಯ, ನಾವು ಶಿವಾಚಾರ್ಯರಾಗಿದ್ದೇವೆ, ಆದರೆ ಕೃಷ್ಣಾಚಾರ್ಯ ಎಂದು ಹೇಳುವುದಿಲ್ಲ. ಶ್ರೀಕೃಷ್ಣನ ಆತ್ಮವೂ ಸಹ ಜ್ಞಾನವನ್ನು ತೆಗೆದುಕೊಳ್ಳುತ್ತಿದ್ದಾರೆ ಏಕೆಂದರೆ ಶ್ರೀಕೃಷ್ಣನಾಗುವುದಕ್ಕಾಗಿ. ಇವರ ರಾಜಧಾನಿ ಸ್ಥಾಪನೆಯಾಗುತ್ತಾ ಇದೆ. ನೀವು ಪತಿತ ಮುಳ್ಳುಗಳಿಂದ ದೈವೀ ಹೂಗಳಾಗುತ್ತಿದ್ದೀರಿ.

ಗೀತೆಯಲ್ಲಿಯೂ ಸಹ ಕೇಳಿದಿರಿ- ಬನ್ನಿ, ಅಜಾಮಿಳರಂತಹ ಪಾಪಿಗಳ ಉದ್ಧಾರ ಮಾಡಿ ಎಂದು. ಗಾಯನವೂ ಇದೆ, ಪತಿತ-ಪಾವನ, ಅವರೇ ಸದ್ಗುರುವಾಗಿದ್ದಾರೆ. ಅವರು ನಿಮ್ಮನ್ನು ನರನಿಂದ ನಾರಾಯಣ, ರಾಜರಿಗೂ ರಾಜರನ್ನಾಗಿ ಮಾಡುತ್ತಾರೆ. ಇದು ಗುರಿ-ಧ್ಯೇಯವಾಗಿದೆ. ಇದು ಪಾಠಶಾಲೆಯಾಗಿದೆಯಲ್ಲವೆ. ಇದರಲ್ಲಿ ನಾವು ನರನಿಂದ ನಾರಾಯಣ, ನಾರಿಯಿಂದ ಲಕ್ಷ್ಮಿಯಾಗುತ್ತೇವೆ. ಇದರಲ್ಲಿ ಅಂಧಶ್ರದ್ಧೆಯ ಮಾತಿಲ್ಲ. ಹೇಗೆ ಶಾಲೆಗಳಲ್ಲಿ ಗುರಿ-ಉದ್ದೇಶಗಳಿರುತ್ತವೆಯಲ್ಲವೆ. ನೀವು ತಂದೆಯ ಬಳಿ ಬೇಹದ್ದಿನ ಆಸ್ತಿಯನ್ನು ಪಡೆಯಲು ಬಂದಿದ್ದೀರಿ. ಅಲ್ಲಿನ ಆಸ್ತಿಯನ್ನು ಇಲ್ಲಿಯೇ ಪಡೆಯಬೇಕಾಗಿದೆ. ಅದಂತೂ ಸುಖಧಾಮವಾಗಿದೆ, ಇದು ದುಃಖಧಾಮವಾಗಿದೆ. ಗೀತೆಯಲ್ಲಿ ಕೇಳಿದಿರಿ- ನಾನು ಅತಿಪುಟ್ಟ ಮಗುವಾಗಿದ್ದೇನೆ... ನೀವು ಮಕ್ಕಳಾಗಿದ್ದೀರಲ್ಲವೆ. ಕೆಲವರು 25 ವರ್ಷದವರು, ಕೆಲವರು 20 ವರ್ಷದವರು. ತಂದೆಯು ತಿಳಿಸುತ್ತಾರೆ- ಒಂದುದಿನ ಮಗುವೂ ಸಹ ಆಸ್ತಿಯನ್ನು ಪಡೆಯಬಹುದು. ಬೇಹದ್ದಿನ ತಂದೆಯು ಪುನಃ ಭಾರತವನ್ನು ವಜ್ರಸಮಾನವನ್ನಾಗಿ ಮಾಡಲು ಬಂದಿದ್ದಾರೆ. ಸತ್ಯಯುಗದಲ್ಲಿ ಎಷ್ಟೊಂದು ವಜ್ರ, ರತ್ನಗಳ ಮಹಲುಗಳಿದ್ದವು! ಮಾತೇ ಕೇಳಬೇಡಿ! ನಂತರ ಯಾವಾಗ ಭಕ್ತಿಮಾರ್ಗವು ಪ್ರಾರಂಭವಾಗುತ್ತದೆಯೋ ಆಗ ಪತಿತ ರಾಜರು ಕುಳಿತು ಸೋಮನಾಥ ಮಂದಿರಗಳನ್ನು ಕಟ್ಟುತ್ತಾರೆ. ರಾಜರುಗಳ ಬಳಿ ಮಂದಿರಗಳಿರುತ್ತವೆ. ಇತ್ತೀಚೆಗಂತೂ ಬಹಳಷ್ಟು ಮಂದಿರಗಳನ್ನು ಕಟ್ಟಿಸುತ್ತಾರೆ. ಎಲ್ಲದಕ್ಕಿಂತ ಮುಖ್ಯಮಂದಿರಗಳನ್ನು ಯಾರು ಮಾಡಿರಬಹುದು! ಯಾರು ಪೂಜ್ಯರಿಂದ ಪೂಜಾರಿಗಳಾಗುತ್ತಾರೆ ಅವರೇ ಮಾಡಿರಬಹುದು. ತಾವೇ ಪೂಜ್ಯ, ತಾವೇ ಪೂಜಾರಿ- ಈ ಮಹಿಮೆಯು ಪರಮಪಿತ ಪರಮಾತ್ಮನದಲ್ಲ. ಅವರ ಮಹಿಮೆಯು ಎಲ್ಲರಿಗಿಂತ ಭಿನ್ನವಾಗಿದೆ. ಪ್ರತಿಯೊಬ್ಬ ಮನುಷ್ಯನ ಮಹಿಮೆಯು ಬೇರೆಯಾಗಿದೆ. ಶ್ರೇಷ್ಠಾತಿಶ್ರೇಷ್ಠ ಮಹಿಮೆಯು ತಂದೆಯದಾಗಿದೆ. ಅವರಿಂದಲೇ ನೀವು 21 ಜನ್ಮಗಳ ಆಸ್ತಿಯನ್ನು ಪಡೆಯುತ್ತೀರಿ ನಂತರ ದ್ವಾಪರದಿಂದ ಹಿಡಿದು ನೀವು ಲೌಕಿಕತಂದೆಯ ಮಗುವಾಗಿ ಎಂತೆಂತಹ ಕರ್ಮಗಳನ್ನು ಮಾಡುತ್ತೀರೋ ಅಂತಹ ಜನ್ಮಗಳನ್ನು ಪಡೆಯುತ್ತೀರಿ. ಧನದಾನ ಮಾಡುವುದರಿಂದ ಒಂದುಜನ್ಮ ಅಲ್ಪಕಾಲದ ಸುಖದ ಆಸ್ತಿಯು ಸಿಗುತ್ತದೆ. ರಾಜರುಗಳೂ ಸಹ ರೋಗಿಗಳಾಗುತ್ತಾರಲ್ಲವೆ. ಸ್ವರ್ಗದಲ್ಲಿ ನೀವು ರೋಗಿಗಳಾಗುವುದಿಲ್ಲ. ನಿಮ್ಮದು 150 ವರ್ಷ ಆಯಸ್ಸಿರುತ್ತದೆ ಆದರೆ ಇಲ್ಲಂತೂ ಅಂದಾಜು 40-45 ವರ್ಷ ಆಯಸ್ಸಿರಬಹುದು. ಅಲ್ಲಿ ಎಷ್ಟೊಂದು ಆರೋಗ್ಯವಂತರಾಗಿರುತ್ತೀರಿ. ಖಾಯಿಲೆ, ದುಃಖ ಇತ್ಯಾದಿಗಳ ಹೆಸರಿರುವುದಿಲ್ಲ. ಶಿವತಂದೆಯು ಮಕ್ಕಳಿಗಾಗಿ ಉಡುಗೊರೆಯನ್ನು ತೆಗೆದುಕೊಂಡು ಬರುತ್ತಾರೆ. ಇದಕ್ಕೆ ಅಂಗೈಯಲ್ಲಿ ಸ್ವರ್ಗವೆಂದು ಹೇಳಲಾಗುತ್ತದೆ. ಪುರುಷಾರ್ಥ ಮಾಡಬೇಕು- ಸೂರ್ಯವಂಶಿಗಳಾದರೂ ಆಗಿ, ಚಂದ್ರವಂಶಿಯಾದರೂ ಆಗಿ, ಸಾಹುಕಾರ ಪ್ರಜೆಗಳಾದರೂ ಆಗಿ. ಕೃಷ್ಣನ ತರಹ ಆಗಬೇಕೆಂದು ಗುರಿ-ಧ್ಯೇಯವಂತೂ ಇದೆ ಆದರೆ ಎಂದೂ ಸಹ ಕೃಷ್ಣಉವಾಚವಾಗಿಲ್ಲ, ಇದು ಭಗವಾನುವಾಚವಾಗಿದೆ. ಇದು ರುದ್ರಜ್ಞಾನ ಯಜ್ಞವೆಂದು ತಿಳಿಸಲಾಗುತ್ತದೆ. ರಾಜಸ್ವ ಎಂದರೆ ಸ್ವರಾಜ್ಯವನ್ನು ಪ್ರಾಪ್ತಿ ಮಾಡಿಕೊಳ್ಳಲು ಇದು ಯಜ್ಞವಾಗಿದೆ. ಇದು ನಿಮ್ಮ ಮಾನವನ ರಥವಾಗಿದೆ, ಇದನ್ನು ಬಲಿಹಾರಿ ಮಾಡಬೇಕಾಗಿದೆ. ಶಾಸ್ತ್ರಗಳಲ್ಲಂತೂ ದೊಡ್ಡ ಕಥೆಗಳನ್ನು ಬರೆದುಬಿಟ್ಟಿದ್ದಾರೆ. ತಂದೆಗೆ ಬಲಿಹಾರಿಯಾಗುವುದರಿಂದ ತಂದೆಯು 21 ಜನ್ಮಗಳಿಗೆ ಬಲಿಹಾರಿಯಾಗುತ್ತಾರೆ. ನೀವು ಮಕ್ಕಳನ್ನು ಶ್ರೇಷ್ಠಾತಿ ಶ್ರೇಷ್ಠರನ್ನಾಗಿ ಮಾಡುತ್ತಾರೆ. ಬ್ರಹ್ಮಾಂಡದಲ್ಲಿ ಇರುವವರೆಂದು ಬ್ರಹ್ಮಾಂಡದ ಮಾಲೀಕರಾದರಲ್ಲವೆ. ಮತ್ತೆ ನೀವು ವಿಶ್ವದ ಮಾಲೀಕರಾಗುತ್ತೀರಿ, ನಾನು ವಿಶ್ವದ ಮಾಲೀಕನಾಗುವುದಿಲ್ಲ. ನಿಮ್ಮನ್ನು ಮಾಡುವುದಕ್ಕಾಗಿ ನಾನು ಬರುತ್ತೇನೆ.

ಪತಿತ-ಪಾವನ ಬನ್ನಿ, ಬಂದು ಪಾವನ ಮಾಡಿ ಎಂದು ನೀವು ಹೇಳುತ್ತೀರಿ ಅಂದಮೇಲೆ ಮತ್ತೆ ಸರ್ವವ್ಯಾಪಿ ಹೇಗಾದರು? ಸದ್ಗತಿದಾತ ಪತಿತ-ಪಾವನನಂತೂ ಒಬ್ಬರೇ ತಂದೆಯಾಗಿದ್ದಾರೆ. ಈ ಸಮಯದಲ್ಲಿ ಎಲ್ಲರೂ ತಮೋಪ್ರಧಾನರಾಗಿಬಿಟ್ಟಿದ್ದಾರೆ. ಸತೋ, ರಜೋ, ತಮೋದಿಂದ ಎಲ್ಲರೂ ಪಾರು ಮಾಡಲೇಬೇಕಾಗಿದೆ. ಪ್ರತಿಯೊಂದು ವಸ್ತು ಮೊದಲು ಸತೋಪ್ರಧಾನವಾಗಿರುತ್ತದೆ ಮತ್ತೆ ತಮೋಪ್ರಧಾನವಾಗುತ್ತದೆ. ಸತ್ಯಯುಗದಲ್ಲಿ ದೇವಿ-ದೇವತೆಗಳು ಸತೋಪ್ರಧಾನ, ತ್ರೇತಾದ ರಾಮರಾಜ್ಯ, ಕ್ಷತ್ರಿಯರು ಸತೋ ನಂತರ ರಜೋದಲ್ಲಿ ವೈಶ್ಯರು, ತಮೋದಲ್ಲಿ ಶೂದ್ರರು ವರ್ಣಗಳೂ ಇದೆಯಲ್ಲವೆ. ವಿರಾಟರೂಪದಲ್ಲಿ ದೇವತಾ, ಕ್ಷತ್ರಿಯ, ವೈಶ್ಯ, ಶೂದ್ರರನ್ನು ತೋರಿಸುತ್ತಾರೆ. ತಂದೆ ಮತ್ತು ಬ್ರಾಹ್ಮಣರನ್ನು ಮರೆಮಾಡಿಬಿಡುತ್ತಾರೆ. ನೀವು ಬ್ರಾಹ್ಮಣರು ದೇವತೆಗಳಿಗಿಂತಲೂ ಶ್ರೇಷ್ಠರಾಗಿದ್ದೀರಿ ಏಕೆಂದರೆ ನೀವು ಭಾರತದ ಶ್ರೇಷ್ಠ ಸೇವೆಯನ್ನು ಮಾಡುತ್ತೀರಿ. ನೀವು ಶ್ರೀಮತದನುಸಾರ ಇದ್ದೀರಿ. ಶ್ರೇಷ್ಠಾತಿಶ್ರೇಷ್ಠ, ಉತ್ತಮಕ್ಕಿಂತ ಉತ್ತಮರಾದ ಭಗವಂತನ ಮತವು ಸಿಗುತ್ತದೆ ಅದರಿಂದ ನೀವೂ ಸಹ ಸರ್ವಶ್ರೇಷ್ಠ ಶಿವತಂದೆಯ ಮುಖಾಂತರ ಶ್ರೀಲಕ್ಷ್ಮೀ-ನಾರಾಯಣರಾಗುತ್ತೀರಿ ನಂತರ

ಮಾಯೆಯ ಪ್ರವೇಶತೆಯಾದಾಗ ನೀವು ಅಸುರರಾಗುತ್ತೀರಿ. ಕಲ್ಪ-ಕಲ್ಪವೂ ತಂದೆಯು ಹೀಗೆಯೇ ಬಂದು ತಿಳಿಸುತ್ತಾರೆ- ತಂದೆಯು ಮನುಷ್ಯರಿಂದ ದೇವತೆಗಳನ್ನಾಗಿ ಮಾಡಲು ಜ್ಞಾನದ ಕಳಶವನ್ನು ನೀವು ಮಾತೆಯರ ಮೇಲಿಟ್ಟಿದ್ದಾರೆ. ಸನ್ಯಾಸಿಗಳಂತೂ ಮಾತೆಯರನ್ನೂ ಸಹ ನರಕದ ದ್ವಾರವೆಂದು ತಿಳಿಯುತ್ತಾರೆ, ನಿಂದನೆ ಮಾಡುತ್ತಾರೆ ನಂತರ ಅದೇ ಮಾತೆಯರ ಬಳಿ ಬಂದು ಬಿಕ್ಷೆ ಬೇಡುತ್ತಾರೆ. ಆದ್ದರಿಂದ ಇನ್ನಷ್ಟು ಸಾಲವು ಏರುತ್ತಾ ಹೋಗುತ್ತದೆ. ಆದ್ದರಿಂದ ಪುನರ್ಜನ್ಮವನ್ನು ಗೃಹಸ್ಥಿಗಳ ಬಳಿಯೇ ತೆಗೆದುಕೊಂಡು ಪುನಃ ಸನ್ಯಾಸ ಮಾಡುತ್ತಾರೆ. ಪುನರ್ಜನ್ಮವನ್ನು ತೆಗೆದುಕೊಳ್ಳದಿದ್ದರೆ ಇಷ್ಟೊಂದು ಜನ ಸನ್ಯಾಸಿಗಳು ಎಲ್ಲಿಂದ ಬರುತ್ತಾರೆ.

ಭಾರತವು ಪವಿತ್ರವಾಗಿತ್ತು, ಅದನ್ನು ಸಂಪೂರ್ಣ ನಿರ್ವಿಕಾರಿ ಪ್ರಪಂಚವೆಂದು ಕರೆಯಲಾಗುತ್ತದೆ. ಅವಶ್ಯವಾಗಿ ದೇವತೆಗಳ ಮುಂದೆ ಹೋಗಿ ನಾವು ಸರ್ವಗುಣ ಸಂಪನ್ನರು..... ಮತ್ತು ತಮ್ಮನ್ನು ತಾವು ನಿರ್ಗುಣನಲ್ಲಿ ಯಾವುದೇ ಗುಣವಿಲ್ಲವೆಂದು ಮಹಿಮೆಯನ್ನು ಮಾಡುತ್ತಾರೆ. ಸರ್ವಗುಣ ಸಂಪನ್ನ.... ಇದು ಶಿವತಂದೆಯ ಮಹಿಮೆಯಲ್ಲ, ಇದು ದೇವತೆಗಳ ಮಹಿಮೆಯಾಗಿದೆ. ಆದರೆ ಪೂರ್ಣ ಜ್ಞಾನವಿಲ್ಲದೆ ಇರುವ ಕಾರಣ ರಾಮ-ಸೀತೆಯರ ಮುಂದೆಯೂ ಈ ಮಹಿಮೆ ಮಾಡುತ್ತಾರೆ. ಶಿವಜಯಂತಿಯನ್ನೂ ಆಚರಿಸುತ್ತಾರೆ ಆದರೆ ಏನನ್ನೂ ಅರಿತುಕೊಂಡಿಲ್ಲ. ಆದ್ದರಿಂದ ತಂದೆಯು ತಿಳಿಸುತ್ತಾರೆ ಈಗ ನಿಮ್ಮ ಜ್ಞಾನದ ಮೂರನೆಯ ನೇತ್ರ ತೆರೆಯುತ್ತದೆ. ದೇವತೆಗಳಿಗೆ ಮೂರನೆಯ ನೇತ್ರವಿರುವುದಿಲ್ಲ. ಚಿತ್ರದಲ್ಲಿ ದೇವತೆಗಳಿಗೆ ತೋರಿಸುತ್ತಾರೆ ಆದರೆ ವಾಸ್ತವದಲ್ಲಿ ನಿಮ್ಮದಾಗಿದೆ ಆದರೆ ಮೂರನೆಯ ನೇತ್ರವು ತೆರೆಯುತ್ತದೆ ನಂತರ ಅದು ಮುಚ್ಚಿಹೋಗಲೂಬಹುದು. ಆಶ್ಚರ್ಯವಾಗಿ ಕೇಳುತ್ತಾರೆ, ಅನ್ಯರಿಗೂ ತಿಳಿಸುತ್ತಾರೆ ನಂತರ ಓಡಿಹೋಗುತ್ತಾರೆ. ಬಹಳ ಒಳ್ಳೊಳ್ಳೆಯ ಮಕ್ಕಳು ಮಾಯೆಗೆ ಸೋಲುತ್ತಾರೆ. ತಂದೆಯು ಪಂಚವಿಕಾರಗಳ ಮೇಲೆ ಜಯ ಪ್ರಾಪ್ತಿ ಮಾಡಿಸಲು ಯುದ್ಧ ಮಾಡಿಸುತ್ತಾರೆ. ಆದರೆ ಮತ್ತ್ಯಾವುದೇ ಯುದ್ಧವಲ್ಲ. ನೀವೀಗ ಬ್ರಹ್ಮಾವಂಶಿಯಾಗಿದ್ದೀರಿ ಮತೆ ದೇವತೆಗಳಾಗುತ್ತೀರಿ. ಈಗ ಶೂದ್ರರಿಂದ ಬ್ರಾಹ್ಮಣವರ್ಣದಲ್ಲಿ ಬಂದಿದ್ದೀರಿ. ಈ ಸಮಯದಲ್ಲಿ ಸೃಷ್ಟಿಚಕ್ರದ ಜ್ಞಾನವು ಬುದ್ಧಿಯಲ್ಲಿದೆ. ನಾಟಕವು ಮುಕ್ತಾಯವಾಗುತ್ತದೆ ಆದ್ದರಿಂದ ತಂದೆಯು ಕರೆದುಕೊಂಡು ಹೋಗಲು ಬಂದಿದ್ದಾರೆ. ಮಾಯೆಯು ಎಲ್ಲರನ್ನು ಪತಿತರನ್ನಾಗಿ ಮಾಡಿದೆ. ಈಗ ತಂದೆಯು ತಿಳಿಸುತ್ತಾರೆ- ಯೋಗಾಗ್ನಿಯಿಂದ ನೀವು ವಿಕರ್ಮಾಜೀತರಾಗಿ, ಇದರಲ್ಲಿ ಪರಿಶ್ರಮವಿದೆ. ಏನು ಮಾಡಬೇಕಾಗಿಲ್ಲ. ಕೇವಲ ತಂದೆಯನ್ನು ನೆನಪು ಮಾಡಬೇಕಾಗಿದೆ. ಬಾಬಾ, ನಾವು ತಮ್ಮವರಾಗಿದ್ದೆವು, ತಾವು ಸತ್ಯಯುಗದಲ್ಲಿ ಕಳುಹಿಸಿದಿರಿ, ನಾವು ಪುನರ್ಜನ್ಮವನ್ನು ಸತ್ಯಯುಗದಲ್ಲಿ ತೆಗೆದುಕೊಳ್ಳುತ್ತಾ ಇದ್ದೆವು ನಂತರ ತ್ರೇತಾದಲ್ಲಿ ಬಂದೆವು ಆಗ ಪುನರ್ಜನ್ಮವನ್ನು ತ್ರೇತಾದಲ್ಲಿ ತೆಗೆದುಕೊಂಡೆವು. ಇದನ್ನೇ ತಂದೆಯು ತಿಳಿಸುತ್ತಾರೆ- ನೀವು ತಮ್ಮ ಜನ್ಮಗಳನ್ನು ಅರಿತುಕೊಂಡಿಲ್ಲ. ನಾನು ತಿಳಿಸುತ್ತೇನೆ. ಮನುಷ್ಯರು 84 ಜನ್ಮಗಳನ್ನು ಹೇಗೆ ತೆಗೆದುಕೊಳ್ಳುತ್ತಾರೆ? 84 ಲಕ್ಷ ಜನ್ಮಗಳ ಮಾತಂತೂ ಇರಲು ಸಾಧ್ಯವಿಲ್ಲ. ಕಲ್ಪದ ಆಯಸ್ಸೇ 5000 ವರ್ಷಗಳಾಗಿದೆ. ಈ ಶಾಸ್ತ್ರಗಳು ನಿಮ್ಮನ್ನು ಘೋರ ಅಂಧಕಾರದಲ್ಲಿ ಮಲಗಿಸಿಬಿಟ್ಟಿತು. ಈಗ ತಂದೆಯು ನಿಮ್ಮನ್ನು ಜಾಗೃತಗೊಳಿಸಿದ್ದಾರೆ. ಈಗ ನೀವು ಜಾಗೃತರಾಗಿ ತಂದೆಯಿಂದ ಆಸ್ತಿಯನ್ನು ಪಡೆಯುತ್ತಿದ್ದೀರಿ. ನೀವು ಚಿಕ್ಕ ಮಕ್ಕಳಾಗಿದ್ದೀರಿ, ಕೆಲವರು 3 ತಿಂಗಳಿನವರು, ಕೆಲವರು 5 ತಿಂಗಳಿನವರು. ನೀವು ಈಶ್ವರನ ಮಕ್ಕಳಾಗುತ್ತೀರಿ ಅಂದಮೇಲೆ ತಾವು ಸತ್ತರೆ ತಮ್ಮ ಪಾಲಿಗೆ ಜಗತ್ತೇ ಸತ್ತಂತೆ. ತಂದೆಯ ಮಕ್ಕಳಾದಿರೆಂದರೆ ದೇಹಾಭಿಮಾನಿವು ಬಿಟ್ಟುಹೋಗುವುದು. ತಂದೆಯು ತಿಳಿಸುತ್ತಾರೆ- ಶರೀರದಲ್ಲಿದ್ದರೂ, ಗೃಹಸ್ಥ ವ್ಯವಹಾರದಲ್ಲಿದ್ದರೂ ಕಮಲಪುಷ್ಪ ಸಮಾನ ಇರಬೇಕು. ಸತ್ಯಯುಗದಲ್ಲಿ ನೀವು ಪವಿತ್ರ ಸಂಬಂಧದಲ್ಲಿರುತ್ತೀರಿ. ಈಗ ಅಪವಿತ್ರ ಗೃಹಸ್ಥ ಧರ್ಮದವರಾಗಿದ್ದೀರಿ. ನೀವು ದೇವಿ-ದೇವತಾ ಧರ್ಮದವರೇ 84 ಜನ್ಮಗಳನ್ನು ತೆಗೆದುಕೊಳ್ಳುತ್ತೀರಿ. ಭಕ್ತಿಯನ್ನೂ ಸಹ ನೀವೇ ಪ್ರಾರಂಭಿಸುತ್ತೀರಿ ಹಾಗೂ ಪೂಜ್ಯರಿಂದ ಪೂಜಾರಿಗಳಾಗುತ್ತಾರೆ. ಮೊದಲು ನೀವು ಅವ್ಯಭಿಚಾರಿ ಭಕ್ತಿ ಮಾಡಿದಿರಿ, ಈಗ ಭಕ್ತಿಯೂ ಸಹ ವ್ಯಭಿಚಾರಿಯಾಗಿಬಿಟ್ಟಿದೆ. ನಂತರ ನಿಮಗೆ ತಂದೆಯಿಂದ ಆಸ್ತಿಯು ಸಿಗುತ್ತದೆ. ತಂದೆಯು ಬರುವುದೂ ಸಹ ಸಂಗಮಯುಗದಲ್ಲಿಯೇ. ಯುಗೇ ಯುಗೇ ಎಂದು ಹೇಳುವುದರಿಂದ ನಾಲ್ಕೂ ಯುಗಗಳೆಂದು ಹೇಳಿ ನಂತರ 24 ಅವತಾರಗಳು- ಮೀನು-ಮೊಸಳೆ ಅವತಾರವೆಂದು ಹೇಗೆ ಹೇಳುತ್ತೀರಿ! ಭಗವಂತನು ಒಬ್ಬರೇ ಆಗಿದ್ದಾರೆ, ರಚಯಿತನೂ ಒಬ್ಬರೇ ಆಗಿದ್ದಾರೆ ಅಂದಾಗ ಅವರ ರಚನೆಯೂ ಸಹ ಒಂದೇ ಆಗಿದೆ. ಒಳ್ಳೆಯದು.

ಮಧುರಾತಿ ಮಧುರ ಅಗಲಿ ಹೋಗಿ ಮರಳಿ ಸಿಕ್ಕಿರುವಂತಹ ಮಕ್ಕಳಿಗೆ ಪ್ರೀತಿಯ ಮಾತಾ-ಪಿತ ಬಾಪ್ದಾದಾರವರ ನೆನಪು ಪ್ರೀತಿ ಹಾಗೂ ಸುಪ್ರಭಾತ. ಆತ್ಮೀಯ ಮಕ್ಕಳಿಗೆ ಆತ್ಮೀಯ ತಂದೆಯ ನಮಸ್ತೆ.

ಧಾರಣೆಗಾಗಿ ಮುಖ್ಯಸಾರ:

1. ಸ್ವರಾಜ್ಯಕ್ಕಾಗಿ ತಂದೆಗೆ ಬಲಿಹಾರಿಯಾಗಬೇಕಾಗಿದೆ. ಸದಾ ಗುರಿ-ಉದ್ದೇಶವನ್ನು ಮುಂದಿಟ್ಟುಕೊಳ್ಳಬೇಕು. ಪುರುಷಾರ್ಥ ಮಾಡಿ ಸೂರ್ಯವಂಶಿಯರಾಗಬೇಕು.

2 ತಂದೆಯಿಂದ ಯಾವ ಜ್ಞಾನದ ಮೂರನೆಯ ನೇತ್ರವು ಸಿಕ್ಕಿದೆ ಅದು ಸದಾ ತೆರೆದಿರಲಿ, ಮಾಯೆಯ ಪ್ರವೇಶತೆಯಾಗದಿರಲಿ, ಇದರ ಮೇಲೆ ಪೂರ್ಣ ಗಮನವನ್ನಿಡಬೇಕು. ಯೋಗಾಗ್ನಿಯಿಂದ ವಿಕರ್ಮಾಜೀತರಾಗಬೇಕು.

ವರದಾನ: ಸರ್ವ ಸಂಬಂಧಗಳಿಂದ ತಂದೆಯನ್ನು ತಮ್ಮವರನ್ನಾಗಿ ಮಾಡಿಕೊಂಡು ಏಕರಸವಾಗಿರುವಂತಹ ನಷ್ಟಾ ಮೋಹ, ಸ್ಮøತಿ ಸ್ವರೂಪ ಭವ

ನಷ್ಟಾಮೋಹ, ಸ್ಮೃತಿ ಸ್ವರೂಪರಾಗಲು ಸರ್ವ ಸಂಬಂಧಗಳಿಂದ ತಂದೆಯನ್ನು ತಮ್ಮವರನ್ನಾಗಿ ಮಾಡಿಕೊಳ್ಳಿ. ಯಾವುದೇ ದೈಹಿಕ ಸಂಬಂಧದಲ್ಲಿ ಬುದ್ಧಿಯ ಸೆಳೆತ ಇಲ್ಲದಿರಲಿ. ಒಂದುವೇಳೆ ಎಲ್ಲಾದರೂ ಸೆಳೆತವಿದ್ದಲ್ಲಿ ಬುದ್ಧಿ ಅಲೆದಾಡುತ್ತಿರುವುದು. ತಂದೆಯನ್ನು ನೆನಪು ಮಾಡಲು ಕುಳಿತು ಕೊಳ್ಳುವಿರಿ ಆದರೆ ಯಾರ ಮೇಲೆ ಮೋಹ ಇರುವುದು ನೆನಪು ಅವರದೇ ಬರುವುದು. ಕೆಲವರ ಮೋಹ ಹಣದಲ್ಲಿರುವುದು, ಕೆಲವರದು ಒಡವೆಯಲ್ಲಿರುವುದು ಕೆಲವರದು ಯಾವುದಾದರೂ ಸಂಬಂಧದಲ್ಲಿ..... ಎಲ್ಲೇ ಇರಲಿ ಅಲ್ಲಿ ಬುದ್ಧಿ ಹೋಗುವುದು. ಒಂದುವೇಳೆ ಪದೇ-ಪದೇ ಬುದ್ಧಿ ಹೋಗುತ್ತಿದ್ದರೆ ಏಕರಸವಾಗಿರಲು ಸಾಧ್ಯವಿಲ್ಲ.

ಸ್ಲೋಗನ್: ಪ್ರಕೃತಿಯನ್ನು ದಾಸಿಯನ್ನಾಗಿ ಮಾಡಿಕೊಂಡಾಗ ಉದಾಸಿತನ ದೂರ ಓಡಿ ಹೋಗುವುದು.